REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 31 | ಸಂಚಿಕೆ : 31 | 6 ನವೆಂಬರ್ 2024 | ಬುಧವಾರ | ಪುಟಗಳು : 8 | ಬೆಲೆ : 2/-

## ಬೆಂಗಳೂರಿನಲ್ಲಿ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟನೆ
## ಬಾಗಲಕೋಟೆಯಲ್ಲಿ ಸಹಕಾರ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ

**ಬೆಂಗಳೂರು** : ಸಹಕಾರ ಇಲಾಖೆಯ ಮಾರ್ಗದರ್ಶನದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನೇತೃತ್ವದಲ್ಲಿ ರಾಜ್ಯದ ಎಲ್ಲಾ ಶೃಂಗ ಸಹಕಾರ ಸಂಸ್ಥೆಗಳು ಹಾಗೂ ವಿವಿಧ ರೀತಿಯ ಸಹಕಾರ ಸಂಘಗಳು 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಪರಿಣಾಮಕಾರಿಯಾಗಿ, ಅರ್ಥಪೂರ್ಣವಾಗಿ ಆಚರಿಸುವಂತೆ ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ಸಹಕಾರಿಗಳಿಗೆ ಕರೆ ನೀಡಿದರು.

71ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಯ ಸಿದ್ದತೆಗಳ ಕುರಿತು ಸಭೆ ನಡೆಸಿದ ಅವರು, ಈ ಬಾರಿಯ ಅಖಿಲ ಭಾರತ ಸಹಕಾರ ಸಪ್ತಾಹವು ನವೆಂಬರ್ 14 ರಂದು ಬೆಂಗಳೂರಿನಲ್ಲಿ ಉದ್ಘಾಟನೆಗೊಳ್ಳಲಿದೆ. ನವೆಂಬರ್ 15 ರಂದು ಹುಬ್ಬಳ್ಳಿ, ನವೆಂಬರ್ 16 ರಂದು ಮಂಗಳೂರು, ನವೆಂಬರ್ 17 ರಂದು ಬಾಗಲಕೊಟೆ, ನವೆಂಬರ್ 18 ರಂದು ಬೀದರ್, ನವೆಂಬರ್ 19 ರಂದು ಚಿಕ್ಕಮಗಳೂರು ಮತ್ತು ನವೆಂಬರ್ 20 ರಂದು ಬೆಳಗಾವಿಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಮತ್ತು ವಿವಿಧ ರಾಜ್ಯಮಟ್ಟದ ಸಹಕಾರ ಮಹಾಮಂಡಳಗಳು, ಅಪೆಕ್ಸ್ ಬ್ಯಾಂಕ್,



ಕಾಸ್ಕಾರ್ಡ್ ಬ್ಯಾಂಕ್ ನೇತೃತ್ವದಲ್ಲಿ ನಡೆಯಲಿದೆ ಎಂದು ಸಚಿವರು ತಿಳಿಸಿದರು.

ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡರು, ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಅಜಯ್‌ಕುಮಾರ್ ಸರನಾಯಕ್, ಸಹಕಾರ ಇಲಾಖೆಯ ಕಾರ್ಯದರ್ಶಿ ಡಾ. ಎಂ.ಎನ್. ಅಜಯ್ ನಾಗಭೂಷಣ್, ಸಹಕಾರ ಸಂಘಗಳ ನಿಬಂಧಕರಾದ ಟಿ.ಹೆಚ್.ಎಂ. ಕುಮಾರ್, ಸಹಕಾರ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಜಿ.ಎಸ್. ರಮಣರೆಡ್ಡಿ, ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್. ನವೀನ್ ಅವರುಗಳು ಭಾಗವಹಿಸಿದ್ದರು.

ನವೆಂಬರ್ 17 ರಂದು ಬಾಗಲಕೋಟೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾಗವಹಿಸುತ್ತಿದ್ದು, ಈ ವೇದಿಕೆಯಲ್ಲಿ ರಾಜ್ಯದ ಸಹಕಾರ ಚಳವಳಿಯಲ್ಲಿ ಅತ್ಯುತ್ತಮ ಸೇವೆಯಲ್ಲಿ ತೊಡಗಿಸಿಕೊಂಡಿರುವ ಸಹಕಾರಿಗಳಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

ರಾಜ್ಯದ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು ಸಹಕಾರ ಸಂಸ್ಥೆಗಳ ಮೇಲೆ ಸಹಕಾರಿ ಧ್ವಜಾರೋಹಣ ಜೊತೆಗೆ ದೀಪಾಲಂಕೃತಗೊಳಿಸಿ, ಪರಿಣಾಮಕಾರಿಯಾಗಿ ಸಹಕಾರ ಸಪ್ತಾಹವನ್ನು ಆಚರಿಸುವಂತೆ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡ ರವರು ಸಹಕಾರಿಗಳಲ್ಲಿ ಮನವಿ ಮಾಡಿದರು.

### ದಿನಾಂಕ : 18.11.2024ರಂದು ಬೀದರದಲ್ಲಿ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಹಾಗೂ ಇತರೇ ಸಹಕಾರ ಸಂಸ್ಥೆಗಳ ನೇತೃತ್ವದಲ್ಲಿ 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು "ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು" ದಿನವನ್ನಾಗಿ ಆಚರಿಸಲಾಗುತ್ತಿದೆ.

ದಿನಾಂಕ : 18.11.2024 ರಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಮಹಾಮಂಡಳ ನಿ., ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿ., ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳ ಇವುಗಳ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ತೆಂಗಿನ ನಾರಿನ ಮಹಾಮಂಡಳ ನಿ., ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಂಘಗಳ ಮಹಾಮಂಡಳ ನಿ., ಇವುಗಳ ಸಹಯೋಗದಲ್ಲಿ 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು "ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು ದಿನವನ್ನಾಗಿ" ಆಚರಿಸಲಾಗುತ್ತಿದೆ.

ಈ ಸಹಕಾರ ಸಪ್ತಾಹದಲ್ಲಿ ಸಹಕಾರಿಗಳಾದ ತಾವೆಲ್ಲರೂ ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಬೇಕಾಗಿ ಮಹಾಮಂಡಳದ ಪರವಾಗಿ ಮುಖ್ಯಕಾರ್ಯ ನಿರ್ವಹಣಾಧಿಕಾರಿಯಾದ ಶ್ರೀ ಪುಂಡಲೀಕ ಎನ್. ಕೇರೂರೆಯವರು ವಿನಂತಿಸಿರುತ್ತಾರೆ.

2 ಏಪ್ರಿಲ್-ಸೆಪ್ಟೆಂಬರ್ ವರದಿ ಬಿಡುಗಡೆಗೊಳಿಸಿದ ಹಣಕಾಸು ಸಚಿವಾಲಯ ದೇಶದ ಆರ್ಥಿಕ ಸಾಧನೆ ತೃಪ್ತಿಕರ
4 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಪರಿಣಾಮಕಾರಿಯಾಗಿ ಆಚರಿಸಲು ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಟಿ.ಎಚ್.ಎಂ. ಕುಮಾರ್ ಸಲಹೆ
7 ನಿಮ್ಮ ಪ್ರಶ್ನೆ – ನಮ್ಮ ಉತ್ತರ

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



# ಡಿಜಿಟಲ್ ತಾಣವನ್ನು ಬಳಸುವವರು ಇಂದು ಹೆಚ್ಚಿನ ಜಾಗ್ರತೆ ವಹಿಸಬೇಕಿದೆ

ಜಗತ್ತಿನಲ್ಲಿ ಎಲ್ಲೆಡೆ ಡಿಜಿಟಲ್ ಕ್ರಾಂತಿ ಶರವೇಗದಲ್ಲಿ ಬೆಳೆಯುತ್ತಿದೆ ಹಾಗೂ ಅದೇ ವೇಗದಲ್ಲಿ ಸೈಬರ್ ಅಪರಾಧ ಪ್ರಕರಣಗಳೂ ಹೆಚ್ಚುತ್ತಿವೆ. ಒಟ್ಟು 45 ವಿವಿಧ ಬಗೆಯ ಸೈಬರ್ ವಂಚನೆ ಪ್ರಕರಣಗಳು ನಡೆಯುತ್ತಿರುವುದಾಗಿ ಪೊಲೀಸ್ ಇಲಾಖೆ ಹೇಳಿದೆ.

ಪ್ರಸ್ತುತ ವರ್ಷದ 10 ತಿಂಗಳ ಅವಧಿಯಲ್ಲಿ ಸೈಬರ್ ವಂಚಕರು ದೇಶದಲ್ಲಿ ಬರೋಬ್ಬರಿ 2,140 ಕೋಟಿ ರೂಪಾಯಿಗಳನ್ನು ದೋಚಿದ್ದಾರೆ ಎಂದು ಕೇಂದ್ರ ಗೃಹ ಸಚಿವಾಲಯದ ಸೈಬರ್ ವಿಭಾಗ ತನ್ನ ವರದಿಯಲ್ಲಿ ತಿಳಿಸಿರುವುದು ಆತಂಕಕಾರಿಯಾದ ವಿಷಯವಾಗಿದೆ. ಕೂಡಲೆ ಕೇಂದ್ರ ಸರ್ಕಾರ, ಆರ್‌ಬಿಐ ಇದನ್ನು ಗಂಭೀರವಾಗಿ ಗಮನಿಸಬೇಕಿದೆ.

ಸೈಬರ್ ವಂಚಕರು ಜಾರಿ ನಿರ್ದೇಶನಾಲಯ, ಕೇಂದ್ರಿಯ ತನಿಖಾ ದಳ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಪೊಲೀಸ್ ಅಧಿಕಾರಿಗಳಂತೆ ಸೋಗು ಹಾಕಿ ಜನರನ್ನು ಬೆದರಿಸಿ ತಕ್ಷಣ ಹಣ ವರ್ಗಾಯಿಸದಿದ್ದರೆ ತೀವ್ರ ಪರಿಣಾಮ ಎದುರಿಸಬೇಕಾಗುತ್ತದೆ ಎಂದ ಕೂಡಲೆ, ಜನರು ಹೆದರಿಕೊಂಡು ಮೋಸ ಹೋಗುತ್ತಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಹೀಗೆ ಮೋಸ ಹೋಗುವವರೆಲ್ಲ ಸುಶಿಕ್ಷಿತರೂ, ತಂತ್ರಜ್ಞಾನ ಕ್ಷೇತ್ರಗಳಲ್ಲೇ ಕಾರ್ಯನಿರ್ವಹಿಸುವವರು ಆಗಿದ್ದಾರೆ ಎನ್ನುವುದು ನನಗೆ ಆಶ್ಚರ್ಯ ಉಂಟು ಮಾಡಿದೆ.

ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಸೈಬರ್ ಕ್ರೈಂ ವಿಷಯದ ಬಗ್ಗೆ ಮಾತನಾಡಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಕೇಂದ್ರ ತನಿಖಾ ಸಂಸ್ಥೆಗಳು ಈ ಸಮಸ್ಯೆಯನ್ನು ಎದುರಿಸಲು ರಾಜ್ಯಗಳೊಂದಿಗೆ ಕೆಲಸ ಮಾಡುತ್ತಿರುವುದಾಗಿ ಹೇಳಿದ್ದಾರೆ ಹಾಗೂ ಜನರಲ್ಲಿ ಜಾಗೃತಿ ಅಗತ್ಯ ಎಂದು ಹೇಳಿದ್ದಾರೆ. ಈ ಕುರಿತಂತೆ ಆರ್‌ಬಿಐ ಕೂಡಾ ಜನರಿಗೆ ಹಾಗೂ ಬ್ಯಾಂಕುಗಳಿಗೆ ಎಚ್ಚರದಿಂದಿರಬೇಕು ಎಂದು ಹೇಳುತ್ತಲೇ ಬಂದಿದೆ. ಹೀಗೆ ಬರಿ ರೇಡಿಯೋ, ಪತ್ರಿಕಾ ಹೇಳಿಕೆ ನೀಡುವ ಮೂಲಕ ಈ ವಂಚನೆಗಳನ್ನು ತಡೆಗಟ್ಟುವುದು ಸಾಧ್ಯವಿಲ್ಲದ ಮಾತು. ಆರ್‌ಬಿಐ ಹಾಗೂ ತನಿಖಾ ಸಂಸ್ಥೆಗಳು ಈ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ವಂಚನೆಗಳನ್ನು ತಡೆಗಟ್ಟಲು ಯತ್ನಿಸಬೇಕಾಗಿದೆ.

ಸಾಮಾನ್ಯ ಅಪರಾಧ ಪ್ರಕರಣಗಳಿಗಿಂತ ಸೈಬರ್‌ಕ್ರೈಂ ಕೇಸ್‌ಗಳ ತನಿಖೆ ವಿಭಿನ್ನವಾಗಿವೆ. ಶೇ.75ರಷ್ಟು ತನಿಖಾ ಪ್ರಕ್ರಿಯೆ ತಾಂತ್ರಿಕ ನೈಪುಣ್ಯದಿಂದಲೇ ಕೂಡಿರಲಿದೆ. ಆರೋಪಿಗಳು ಬಳಸಿದ ಮೊಬೈಲ್ ನಂಬರ್, ಕಂಪ್ಯೂಟರ್‌ನ ಐಪಿ ವಿಳಾಸ, ಬ್ಯಾಂಕ್ ಖಾತೆಯ ವಿವರಗಳನ್ನು ಸಂಗ್ರಹಿಸಬೇಕು. ಬಹುತೇಕ ಕೇಸ್‌ಗಳಲ್ಲಿ ಈ ಎಲ್ಲಾ ದಾಖಲೆಗಳು ಆರೋಪಿಯಲ್ಲದವರ ಹೆಸರಿನಲ್ಲಿರುತ್ತವೆ. ಇವೆಲ್ಲವನ್ನು ಭೇಧಿಸಿ ಮುಂದೆ ಈ ರೀತಿಯ ಅಪರಾಧಗಳು ನಡೆಯದಂತೆ ನೋಡಿಕೊಳ್ಳಬೇಕಿದೆ.

ಅಷ್ಟು ಮಾತ್ರವಲ್ಲ ಡಿಜಿಟಲ್ ತಾಣವನ್ನು ಬಳಸುವವರು ಕೂಡ ಹೆಚ್ಚಿನ ಜಾಗ್ರತೆ ವಹಿಸಬೇಕಿದೆ. ಸೈಬರ್ ಕ್ರೈಮ್‌ಗೆ ಒಳಗಾದ ಕೂಡಲೆ ದೂರು ದಾಖಲಿಸಲು ರಾಷ್ಟ್ರೀಯ ಸೈಬರ್ ಅಪರಾಧ ವರದಿ ಪೋರ್ಟಲ್‌ನ ಸಹಾಯ ಸಂಖ್ಯೆ–1930 ಅಥವ ಸಮೀಪದ ಪೊಲೀಸ್ ಸ್ಟೇಶನ್‌ಗೆ ಹೋಗಿ ದೂರು ದಾಖಲಿಸಿ. ಸಾಧ್ಯವಾಗದಿದ್ದರೆ, cybercrime.gov.in ಮೂಲಕ ನಿಮ್ಮ ದೂರನ್ನು ಸಲ್ಲಿಸಬಹುದಾಗಿದೆ ಎಂದು ನನಗೆ ತಿಳಿದಿರುವ ಮಾಹಿತಿಯನ್ನು ಇಲ್ಲಿ ಹಂಚಿಕೊಳ್ಳಬಯಸುತ್ತೇನೆ.

▸▸ ಎಚ್.ಕೆ. ಪಾಟೀಲ

# ಏಪ್ರಿಲ್–ಸೆಪ್ಟೆಂಬರ್ ವರದಿ ಬಿಡುಗಡೆಗೊಳಿಸಿದ ಹಣಕಾಸು ಸಚಿವಾಲಯ

## ದೇಶದ ಆರ್ಥಿಕ ಸಾಧನೆ ತೃಪ್ತಿಕರ

**ನವದೆಹಲಿ (ಪಿಟಿಐ) :** 2024–25ರ ಹಣಕಾಸು ವರ್ಷದ ಮೊದಲಾರ್ಧದಲ್ಲಿ (ಏಪ್ರಿಲ್–ಸೆಪ್ಟೆಂಬರ್) ದೇಶದ ಆರ್ಥಿಕ ಸಾಧನೆ ತೃಪ್ತಿಕರವಾಗಿದೆ ಎಂದು ಹಣಕಾಸು ಸಚಿವಾಲಯದ ವರದಿ ತಿಳಿಸಿದೆ. ದೇಶದ ಆರ್ಥಿಕತೆಯ ಮುನ್ನೋಟವು ಉತ್ತಮವಾಗಿದೆ, ಕೃಷಿ ವಲಯದ ಸಕಾರಾತ್ಮಕತೆ, ಹಬ್ಬದ ಋತುವಿನಿಂದ ಹೆಚ್ಚಿದ ಬೇಡಿಕೆ ಮತ್ತು ಸರ್ಕಾರದ ವೆಚ್ಚದಲ್ಲಿನ ಹೆಚ್ಚಳವು ದೇಶದಲ್ಲಿ ಹೂಡಿಕೆ ಚಟುವಟಿಕೆಯನ್ನು ಉತ್ತೇಜಿಸುತ್ತದೆ ಎಂದು ಹೇಳಿದೆ.

ಪಶ್ಚಿಮ ಏಷ್ಯಾ ಬಿಕ್ಕಟ್ಟು, ಪ್ರಮುಖ ರಾಷ್ಟ್ರಗಳ ವ್ಯಾಪಾರ ನೀತಿ ಬಗ್ಗೆ ಅನಿಶ್ಚತತೆಗಳು ಮತ್ತು ಜಾಗತಿಕ ಅಂಶಗಳಿಂದ ಅಪಾಯ ಉಂಟಾಗಬಹುದು ಎಂದು ಹೇಳಿದೆ. ಹೆಚ್ಚಿನ ಮಳೆ ಮತ್ತು ಜನರು ಹೊಸ ಖರೀದಿಗಳಿಂದ ದೂರವಿರಲು ಒಲವು ತೋರುತ್ತಿರುವುದರಿಂದ ನಗರ ಬೇಡಿಕೆಯು ಇಳಿಕೆಯಾಗಿದೆ. ಎರಡು ತಿಂಗಳು ಇಳಿಕೆ ಕಂಡಿದ್ದ ಚಿಲ್ಲರೆ ಹಣದುಬ್ಬರವು ತರಕಾರಿಗಳ ಬೆಲೆ ಏರಿಕೆಯಿಂದ ಸೆಪ್ಟೆಂಬರ್‌ನಲ್ಲಿ ಏರಿತು. ಆದರೂ, ಕೆಲವು ತರಕಾರಿಗಳ ಬೆಲೆಯ ಏರಿಕೆಯನ್ನು ಹೊರತು ಪಡಿಸಿದರೆ, ಹಣದುಬ್ಬರವು ನಿಯಂತ್ರಣದಲ್ಲಿದೆ ಎಂದು ಹೇಳಿದೆ.

ವಿದೇಶಿ ಬಂಡವಾಳ ಹೂಡಿಕೆದಾರರಲ್ಲಿ ಭಾರತದೆಡೆಗಿನ ಮನೋಭಾವವು ಸಕಾರಾತ್ಮಕವಾಗಿದೆ. ಈ ಸಕಾರಾತ್ಮಕ ಭಾವನೆಗಳನ್ನು ದೇಶದಲ್ಲಿ ಬಂಡವಾಳ ಹೂಡಿಕೆಗಳಾಗಿ ಪರಿವರ್ತಿಸಲು, ಬೆಳವಣಿಗೆಯ ವೇಗವನ್ನು ಉಳಿಸಿಕೊಳ್ಳುವುದು ಅಗತ್ಯ ಆದರೂ, ವಿದೇಶಿ ಹೂಡಿಕೆದಾರರು ಕಳೆದ ತಿಂಗಳು ದೇಶದ ಈಕ್ವಿಟಿಗಳಿಂದ ರೂ.85,790ಕೋಟಿ ವಾಪಸ್ ತೆಗೆದುಕೊಂಡಿದ್ದಾರೆ.

ಸೆಪ್ಟೆಂಬರ್ ಅಂತ್ಯದ ವೇಳೆಗೆ ವಿದೇಶಿ ವಿನಿಮಯ ಮೀಸಲು ಸಂಗ್ರಹ ರೂ.58.84ಲಕ್ಷ ಕೋಟಿ (700 ಶತಕೋಟಿಡಾಲರ್) ಮೀರಿದೆ.ಇದು 700 ಶತಕೋಟಿ ಡಾಲರ್‌ಗೂ ಹೆಚ್ಚಿನ ಮೀಸಲು ಹೊಂದಿರುವ ಅಗ್ರ ನಾಲ್ಕು ದೇಶಗಳಲ್ಲಿ ಭಾರತವನ್ನು ಒಂದಾಗಿಸಿದೆ.

ನೌಕರರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ಮತ್ತು ನೌಕ್ರಿಡಾಟ್ ಕಾಂ ಅಂಕಿ–ಅಂಶಗಳು ಉದ್ಯೋಗ ಸೃಷ್ಟಿಯಲ್ಲಿ ಏರಿಕೆಯನ್ನು ತೋರಿಸುತ್ತಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಪ್ರಗತಿ ಶೇ.6.5 ರಿಂದ ಶೇ.7ರ ನಡುವೆ ಬೆಳೆಯುತ್ತದೆ ಎಂದು ವರದಿ ಹೇಳಿದೆ.

## ಗಾಂಧಿ ಗಂಜ ಕೋ-ಆಪರೇಟಿವ್ ಬ್ಯಾಂಕಿನ ಸುವರ್ಣ ಮಹೋತ್ಸವ ಸಮಾರಂಭದ ಛಾಯಾಚಿತ್ರಗಳು




ಗಾಂಧಿ ಗಂಜ ಕೋ–ಆಪರೇಟಿವ್ ಬ್ಯಾಂಕಿನ ಸುವರ್ಣ ಮಹೋತ್ಸವ ಪ್ರಯುಕ್ತ ಸ್ಮರಣ ಸಂಚಿಕೆ ಬಿಡುಗಡೆ




ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಾದ ಶ್ರೀ ಎಚ್.ಕೆ. ಪಾಟೀಲರು ಮಾತನಾಡುತ್ತಿರುವುದು.

## ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕಿನ ಶಾಖೆಯ ಸ್ಥಳಾಂತರ



**ಬೆಂಗಳೂರು :** ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕಿನ ಸುಂಕದಕಟ್ಟೆ ಶಾಖೆಯನ್ನು ಅಂದರಹಳ್ಳಿಗೆ ಸ್ಥಳಾಂತರಗೊಳಿಸಿದ್ದು, ಶಾಖೆಯ ಉದ್ಘಾಟನೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಹೆಚ್.ಸಿ. ಗೋಪಾಲ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಡಾ. ಉಮಾ. ಆರ್. ಹಾಗೂ ನಿರ್ದೇಶಕರುಗಳಾದ ಪಿ. ಮರಿಯಪ್ಪ, ಪಿ.ಎಲ್. ವೆಂಕಟೇಶಮೂರ್ತಿ, ಜಿ. ಸಿದ್ದಪ್ಪ, ಬಿ.ಎಸ್. ಕನ್ಯಾಕುಮಾರಿ, ಎಂ. ಜಯರಾಮ್, ರಾಜಗೋಪಾಲಹೆಗ್ಡೆ, ಎಂ.ಟಿ. ವೀರಣ್ಣಗೌಡ, ಕೆ. ಜಯರಾಮು, ಎಂ. ಕೆಂಪಯ್ಯ, ಡಿ.ಎಲ್. ಚನ್ನಕೇಶವ, ಎಸ್. ಚಂದ್ರಮೌಳಿ, ಟಿ.ಆರ್. ಸ್ವಾಮಿ, ಆರ್. ಸಂತೋಷ್, ಕೆ. ಚಂದ್ರಕಲಾ ಉಪಸ್ಥಿತರಿದ್ದರು.

## 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಪರಿಣಾಮಕಾರಿಯಾಗಿ ಆಚರಿಸಲು ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಟಿ.ಎಚ್.ಎಂ. ಕುಮಾರ್ ಸಲಹೆ





**ಬೆಂಗಳೂರು :** ಕರ್ನಾಟಕ ರಾಜ್ಯದಾದ್ಯಂತ ಎಲ್ಲಾ ರೀತಿಯ ಸಹಕಾರ ಸಂಸ್ಥೆಗಳು 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಪರಿಣಾಮಕಾರಿಯಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸುವಂತೆ ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಟಿ.ಎಚ್. ಎಂ. ಕುಮಾರ್ ಅವರು ಸಹಕಾರಿಗಳಲ್ಲಿ ಮನವಿ ಮಾಡಿದರು ಹಾಗೂ ಸಹಕಾರ ಇಲಾಖಾಧಿಕಾರಿಗಳು ಕಾರ್ಯಕ್ರಮದ ಯಶಸ್ಸಿಗೆ ಮಾರ್ಗದರ್ಶನ ನೀಡಲು ಅವರು ಸಲಹೆ ಮಾಡಿದರು.

ಸಹಕಾರ ಸಂಘಗಳ ನಿಬಂಧಕರ ಕಚೇರಿಯಲ್ಲಿ ನಿಬಂಧಕರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಸಹಕಾರ ಸಪ್ತಾಹ ಕಾರ್ಯಕ್ರಮಗಳ ಆಯೋಜಕ ಸಂಸ್ಥೆಗಳು ಮತ್ತು ಹಿರಿಯ ಅಧಿಕಾರಿಗಳ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಬಾಗಲಕೋಟೆ ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅಜಯಕುಮಾರ್ ಸರನಾಯಕ್, ಸಹಕಾರ ಮಹಾಮಂಡಳದ ನಿರ್ದೇಶಕರಾದ ಶ್ರೀ ಎ.ಸಿ. ನಾಗರಾಜ್, ಪಟ್ಟಣ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರಾದ ಶ್ರೀ ರುದ್ರೇಗೌಡ, ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಜಿಲ್ಲಾ ಸಹಕಾರ ಯೂನಿಯನ್ನುಗಳ ಅಧ್ಯಕ್ಷರುಗಳು, ಕೆ.ಎಂ.ಎಫ್. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜಗದೀಶ್, ಸಹಕಾರ ಸಂಘಗಳ ಅಪರ ನಿಬಂಧಕರುಗಳಾದ ಶ್ರೀ ಕೆ.ಎಸ್. ನವೀನ್, ಶ್ರೀ ವೈ.ಹೆಚ್. ಗೋಪಾಲಕೃಷ್ಣ, ಶ್ರೀ ಹೆಚ್. ಬಾಲಶೇಖರ್, ಶ್ರೀ ಲಕ್ಷ್ಮೀಪತಯ್ಯ, ಶ್ರೀ ನೀಲಪ್ಪ ಸಿದ್ದಣ್ಣವರ್, ಶ್ರೀ ಗುರುಸ್ವಾಮಿ, ಬೆಂಗಳೂರು ಪ್ರಾಂತ್ಯ ಜಂಟಿ ನಿಬಂಧಕರಾದ ಶ್ರೀ ಅಶ್ವಥನಾರಾಯಣ, ಬೆಳಗಾವಿ ಪ್ರಾಂತ್ಯ ಜಂಟಿ ನಿಬಂಧಕರಾದ ಡಾ. ಎಸ್. ಸುರೇಶ್‌ಗೌಡ, ಕಲಬುರಗಿ ಪ್ರಾಂತ್ಯ ಜಂಟಿ ನಿಬಂಧಕರಾದ ಶ್ರೀ ವಿಶ್ವನಾಥ ಮಲಕೂಡ ರವರು ಸೇರಿದಂತೆ ಡಿಸಿಸಿ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರುಗಳು, ಜಂಟಿ ನಿಬಂಧಕರುಗಳು, ಉಪನಿಬಂಧಕರುಗಳು, ವಿವಿಧ ಸಹಕಾರ ಮಹಾಮಂಡಳಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ : ಪಿರಿಯಾಪಟ್ಟಣ ಶಾಖೆಯ ATM ಉದ್ಘಾಟನೆ

ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ನ ನಾಲ್ಕನೆಯ ATM ಅನ್ನು ಪಿರಿಯಾಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ ಸ್ವಂತಕಟ್ಟಡದಲ್ಲಿ ದಿನಾಂಕ : 25.10.2024ರ ಶುಕ್ರವಾರ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಕೆ.ಎನ್. ಬಸಂತ್‌ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ತಂಬಾಕು ಮಂಡಳಿಯ ನಿವೃತ್ತ ಮಾರುಕಟ್ಟೆ ಅಧೀಕ್ಷಕರಾದ ಶ್ರೀ ಕೆ.ಎನ್. ದಿನೇಶ್‌ರವರು, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಸಿ.ಸುರೇಶರವರು ಮತ್ತು ಆಡಳಿತ ಮಂಡಳಿ ನಿರ್ದೇಶಕರುಗಳಾದ ಶ್ರೀ ಎಂ.ಕೆ. ಮಹದೇವ್, ಶ್ರೀ ಎಸ್. ಮಹದೇವಯ್ಯ, ಶ್ರೀ ಕೇಶವ್, ಶ್ರೀ ವೈ.ಎಸ್. ಕುಮಾರ್, ಶ್ರೀ ಚಂದ್ರಕುಮಾರ್, ಶ್ರೀ ಎ. ಚಂದ್ರಶೇಖರ್ ಹಾಗೂ ಶ್ರೀ ಸುಬ್ಬನಾಯಕ, ಪಿರಿಯಾಪಟ್ಟಣ ಶಾಖಾ ವ್ಯವಸ್ಥಾಪಕ ಶ್ರೀ ಮಂಚನಾಯಕ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.



# ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ




ವಾಸವಿ ಎಂಎಸ್‌ಸಿಎಂ ಕೋ-ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಬಿ.ಎ. ಕೃಷ್ಣ ಭಗವಾನ್‌ರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀಮತಿ ಬಿ.ಎಂ. ಸರಸ್ವತಿರವರು ಉಪಸ್ಥಿತರಿದ್ದರು.




ಬೆಂಗಳೂರು ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣನಿಧಿ ಚೆಕ್ಕನ್ನು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಬಿ. ಶ್ರೀನಿವಾಸಮೂರ್ತಿರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಸಿಬ್ಬಂದಿಗಳಾದ ಶ್ರೀ ಸಿ.ಪ್ರಭಾಕರ್ ಹಾಗೂ ಶ್ರೀ ಪಿ.ಪ್ರಕಾಶ್ ಉಪಸ್ಥಿತರಿದ್ದರು.

## ಹೆಚ್ಚಿನ ಲಾಭಾಂಶದ ಆಸೆ ತೋರಿಸಿ ರೂ. 95 ಲಕ್ಷ ಸೈಬರ್ ವಂಚನೆ

**ಬೆಂಗಳೂರು :** ಇಬ್ಬರು ಖ್ಯಾತ ಉದ್ಯಮಿಗಳನ್ನು ಒಳಗೊಂಡ ನಕಲಿ ವಿಡಿಯೋಗಳಿಗೆ ಬಲಿಯಾಗಿ ಸೈಬರ್ ವಂಚಕರಿಗೆ ಸುಮಾರು 95 ಲಕ್ಷ ರೂಪಾಯಿಗಳನ್ನು ಕಳೆದುಕೊಂಡಿರುವುದಾಗಿ ಬೆಂಗಳೂರಿನ ಇಬ್ಬರು ಪೊಲೀಸರಿಗೆ ದೂರು ನೀಡಿದ್ದಾರೆ.

ಎರಡೂ ಪ್ರಕರಣಗಳಲ್ಲಿ, ದೂರುದಾರರು ನಕಲಿ ವಿಡಿಯೋಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲಿಲ್ಲ ಮತ್ತು ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಕೆಲವು ಅನುಮಾನಾಸ್ಪದ ಲಿಂಕ್‌ಗಳನ್ನು ಕ್ಲಿಕ್ ಮಾಡುವ ಮೂಲಕ ಹಣ ಕಳೆದುಕೊಂಡಿದ್ದಾರೆ.

"ದೂರುದಾರರ ಪ್ರಕಾರ, ಸೋಶಿಯಲ್ ಮಿಡಿಯಾ ಪ್ಲಾಟ್‌ಫಾರ್ಮ್‌ಗಳಲ್ಲಿ ಇನ್ಫೋಸಿಸ್ ಸಹ-ಸಂಸ್ಥಾಪಕ ಎನ್‌ಆರ್ ನಾರಾಯಣ ಮೂರ್ತಿ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಖೇಶ್ ಅಂಬಾನಿ ಅವರನ್ನು ಒಳಗೊಂಡ ನಕಲಿ ವಿಡಿಯೋಗಳನ್ನು ಬಳಸಿಕೊಂಡು ಮೋಸ ಮಾಡಲಾಗಿದೆ"ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೊದಲ ಪ್ರಕರಣದಲ್ಲಿ, ಬನಶಂಕರಿ ನಿವಾಸಿಯೊಬ್ಬರು ಹೂಡಿಕೆಯ ಮೇಲೆ ಹೆಚ್ಚಿನ ಲಾಭಾಂಶ ಸಿಗಲಿದೆ ಎಂಬ ಜಾಹೀರಾತು ವಿಡಿಯೋವನ್ನು ನೋಡಿ ಮೋಸ ಹೋಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಮಹಿಳೆಯ ಪ್ರಕಾರ, ಅವರು ಕೆಲವು ಅನುಮಾನಾಸ್ಪದವಾದ ವೆಬ್‌ಸೈಟ್ ಲಿಂಕ್ ಮೇಲೆ ಕ್ಲಿಕ್ ಮಾಡಿದ್ದಾರೆ ಮತ್ತು ಆಪಾದಿತ ವೇದಿಕೆಯೊಂದಿಗೆ ತಮ್ಮ ವಿವರಗಳನ್ನು ಹಂಚಿಕೊಂಡಿದ್ದಾರೆ. ನಂತರ, ಆಕೆಗೆ ಅಪರಿಚಿತ ವ್ಯಕ್ತಿಯಿಂದ ಕರೆ ಬಂದಿದ್ದು, ತಾನು ಪ್ಲಾಟ್‌ಫಾರ್ಮ್‌ಗೆ ಸಂಬಂಧಿಸಿದ ಏಜೆಂಟ್ ಎಂದು ಹೇಳಿಕೊಂಡು ಹೆಚ್ಚಿನ ಲಾಭ ಗಳಿಸಲು ಹೆಚ್ಚು ಹೂಡಿಕೆ ಮಾಡುವಂತೆ ಮನವೊಲಿಸಿದ್ದಾರೆ.

ಮಹಿಳೆ ಆರಂಭದಲ್ಲಿ ಸುಮಾರು 1.4 ಲಕ್ಷ ರೂಪಾಯಿ ಹೂಡಿಕೆ ಮಾಡಿ 8,000 ರೂಪಾಯಿ ರಿಟರ್ನ್ಸ್ ಪಡೆದಿದ್ದಾರೆ ಮತ್ತು ಎರಡನೇ ಬಾರಿಗೆ 6.7 ಲಕ್ಷ ರೂಪಾಯಿ ಹೂಡಿಕೆ ಮಾಡಿದಾಗ ಯಾವುದೇ ರಿಟರ್ನ್ಸ್ ಸಿಗಲಿಲ್ಲ ಮತ್ತು ಹೂಡಿಕೆ ಮಾಡಿದ ಹಣವನ್ನೂ ಕಳೆದುಕೊಂಡಿದ್ದಾಳೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅದೇ ರೀತಿ ಆಕೆ ಮತ್ತೊಂದು ವೇದಿಕೆಯಲ್ಲಿ 67 ಲಕ್ಷ ರೂಪಾಯಿ ಕಳೆದುಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಎರಡನೆಯ ಪ್ರಕರಣದಲ್ಲಿ, ನಿವೃತ್ತ ಉದ್ಯೋಗಿಯೊಬ್ಬರು ಹೂಡಿಕೆಯ ಮೇಲೆ ಹೆಚ್ಚಿನ ಲಾಭಾಂಶ ಸಿಗಲಿದೆ ಎಂಬ ಜಾಹೀರಾತು ವಿಡಿಯೋಗೆ ಬಲಿಯಾಗಿದ್ದಾರೆ ಎಂದು ಅಧಿಕಾರಿ ಹೇಳಿದ್ದಾರೆ.

ವಂಚಕರು ಹಂಚಿಕೊಂಡ ಎರಡು ವಿಭಿನ್ನ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾಯಿಸುವ ಮೂಲಕ 19 ಲಕ್ಷ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ಹಣ ವರ್ಗಾವಣೆ ಮಾಡಿದ ನಂತರ ಅವರಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಅವರು ತಿಳಿಸಿದ್ದಾರೆ.

ಈ ಸಂಬಂಧ ಸಿಇಎನ್(ಸೈಬರ್ ಎಕನಾಮಿಕ್ ಮತ್ತು ನಾರ್ಕೋಟಿಕ್ಸ್) ದಕ್ಷಿಣ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ಹಗರಣದಲ್ಲಿ ಭಾಗಿಯಾಗಿರುವ ಆರೋಪಿಗಳ ಪತ್ತೆಗಾಗಿ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# 71ನೇ ಅಖಿಲ ಭಾರತ ಸಹಕಾರ ಸಪ್ತಾಹ – 2024

## ಧ್ಯೇಯ : "ವಿಕಸಿತ ಭಾರತ" ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ

## Theme: Role of Cooperatives in building "Viksit Bharat"

ರಾಷ್ಟ್ರೀಯ ಸಹಕಾರ ಯೂನಿಯನ್, ನವದೆಹಲಿ ಇವರ ಮಾರ್ಗದರ್ಶನದಲ್ಲಿ ದೇಶಾದ್ಯಂತ ನವೆಂಬರ್ 14 ರಿಂದ ನವೆಂಬರ್ 20, 2024 ರವರೆಗೆ 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು "ವಿಕಸಿತ ಭಾರತ" ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಎಂಬ ಧ್ಯೇಯದೊಂದಿಗೆ 7 ದಿನಗಳ ಪ್ರತ್ಯೇಕ ದಿನದ ವಿಷಯಗಳೊಂದಿಗೆ ರಾಜ್ಯದ ಎಲ್ಲಾ ಸಹಕಾರ ಸಂಸ್ಥೆಗಳು ಪರಿಣಾಮಕಾರಿಯಾಗಿ ಸಹಕಾರ ಸಪ್ತಾಹವನ್ನು ಆಚರಿಸಲು ಈ ಮೂಲಕ ಕೋರಿದೆ.

| 7 ದಿನಗಳ ಆಚರಣೆಯ ಶೀರ್ಷಿಕೆಗಳು | |
|---|---|
| 14.11.2024<br>ಗುರುವಾರ<br>ಬೆಂಗಳೂರು | Strengthening Cooperation Movement through New Initiatives of Ministry of Cooperation.<br>ಸಹಕಾರ ಸಚಿವಾಲಯದ ನೂತನ ಪ್ರಯತ್ನಗಳ ಮೂಲಕ ಸಹಕಾರ ಚಳವಳಿಯನ್ನು ಬಲಪಡಿಸುವುದು. |
| 15.11.2024<br>ಶುಕ್ರವಾರ<br>ಚಿತ್ರದುರ್ಗ | Innovation, Technology and Good Governance in Cooperatives.<br>ಸಹಕಾರ ಸಂಸ್ಥೆಗಳಲ್ಲಿ ಅನ್ವೇಷಣೆ, ತಾಂತ್ರಿಕತೆ ಮತ್ತು ಉತ್ತಮ ಆಡಳಿತ |
| 16.11.2024<br>ಶನಿವಾರ<br>ಮಂಗಳೂರು | The Role of Cooperatives in Fostering Entrepreneurship, Employment and Skill Development.<br>ಉದ್ಯಮಶೀಲತೆ, ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ |
| 17.11.2024<br>ಭಾನುವಾರ<br>ಬಾಗಲಕೋಟೆ | Transforming Cooperative Enterprises.<br>ಸಹಕಾರಿ ಉದ್ಯಮಗಳಲ್ಲಿ ಪರಿವರ್ತನೆ |
| 18.11.2024<br>ಸೋಮವಾರ<br>ಬೀದರ್ | Strengthening Cooperation among Cooperatives.<br>ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು |
| 19.11.2024<br>ಮಂಗಳವಾರ<br>ಚಿಕ್ಕಮಗಳೂರು | Cooperatives for Women, Youth and Weaker Sections.<br>ಮಹಿಳೆಯರು, ಯುವಕರು ಮತ್ತು ಅಬಲವರ್ಗಗಳಿಗಾಗಿ ಸಹಕಾರ ಸಂಸ್ಥೆಗಳು |
| 20.11.2024<br>ಬುಧವಾರ<br>ಬೆಳಗಾವಿ | Role of Cooperatives in Achieving SDGs and way forward for Better World.<br>ಉತ್ತಮ ವಿಶ್ವ ನಿರ್ಮಾಣ ಹಾದಿಗಾಗಿ ಹಾಗೂ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ |

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಮುಖ್ಯಕಾರ್ಯನಿರ್ವಹಣಾಧಿಕಾರಿ ಇನ್ನು 10 ತಿಂಗಳಲ್ಲಿ ನಿವೃತ್ತರಾಗುತ್ತಾರೆ. ರಿಜರ್ವ್ ಬ್ಯಾಂಕಿನ ಬೋರ್ಡ್ ಆಫ್ ಮ್ಯಾನೇಜಮೆಂಟ್ (ಬಿ.ಒ.ಎಮ್) ಸಂಬಂಧಿತ ದಿನಾಂಕ : ಡಿಸೆಂಬರ್ 31, 2019ರ ಸುತ್ತೋಲೆಯಲ್ಲಿ ತಿಳಿಸಿದಂತೆ ಹಾಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಯ ನಿವೃತ್ತಿಯ ಮೂರು ತಿಂಗಳ ಮೊದಲು ಹೊಸ ಮುಖ್ಯಕಾರ್ಯನಿರ್ವಹಣಾಧಿಕಾರಿಯ ನೇಮಕಾತಿಯ ಬಗ್ಗೆ ರಿಜರ್ವ್ ಬ್ಯಾಂಕಿಗೆ ತಿಳಿಸಬೇಕಾಗಿದೆ. ಹೊಸ ಮುಖ್ಯಕಾರ್ಯನಿರ್ವಾಹಕರ ನೇಮಕಾತಿಗೆ ಸಾಮಾನ್ಯ ಸಭೆಯ ಠರಾವಿನ ಅಗತ್ಯವಿದೆ. ಮುಂದಿನ ಏಳು ತಿಂಗಳಲ್ಲಿ ವಾರ್ಷಿಕ ಸಾಮಾನ್ಯ ಸಭೆ ಇಲ್ಲದಿರುವುದರಿಂದ ಹೊಸ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯ ನೇಮಕದ ಠರಾವಿಗಾಗಿ ನಾವು ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬೇಕೆ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ರಿಸರ್ವ್ ಬ್ಯಾಂಕಿನ ಬಿ.ಒ.ಎಮ್. ಸಂಬಂಧಿತ ಸುತ್ತೋಲೆಯಲ್ಲಿ ಹೊಸ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯ ನೇಮಕಾತಿಗೆ ವಾರ್ಷಿಕ / ವಿಶೇಷ ಮಹಾಸಭೆಯ ಒಪ್ಪಿಗೆ ಅಗತ್ಯವಿದ್ದರೂ, ರಿಜರ್ವ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರ ನೇಮಕಾತಿ ಸಂಬಂಧಿತ ಸುತ್ತೋಲೆಯಲ್ಲಿ ಈ ನಿಬಂಧನೆಯನ್ನು ರದ್ದುಗೊಳಿಸಲಾಗಿದೆ. ವ್ಯವಸ್ಥಾಪಕ ನಿರ್ದೇಶಕರ ಸಂಬಂಧಿತ ಸುತ್ತೋಲೆಯ ಕಾರ್ಯಾಚರಣೆಗೆ ವಿವಿಧ ಉಚ್ಛ ನ್ಯಾಯಾಲಯಗಳಿಂದ ತಡೆಯಾಜ್ಞೆ ಬಂದಿದೆ. ಈ ಪರಿಸ್ಥಿತಿಯಲ್ಲಿ ರಿಜರ್ವ್ ಬ್ಯಾಂಕಿನ ಮೇಲೆ ತಿಳಿಸಿದ ಸುತ್ತೋಲೆಗಳ ಜಾರಿಗೊಳಿಸುವಿಕೆ ಬಗ್ಗೆ ಗೊಂದಲವಿದೆ. ಆದ್ದರಿಂದ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯ ನೇಮಕಾತಿ ಬಗ್ಗೆ ಸಾಮಾನ್ಯ ಸಭೆಯ ಠರಾವಿನ ಅವಶ್ಯಕತೆಯಿಲ್ಲ.

**02. ನಮ್ಮ ಬ್ಯಾಂಕು ಆರ್ಥಿಕವಾಗಿ ಸುದೃಢವಾಗಿರುವುದರಿಂದ ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ ರಿಜರ್ವ್ ಬ್ಯಾಂಕಿನ ಪೂರ್ವಾನುಮತಿ ಇಲ್ಲದೆ ಬ್ಯಾಂಕಿನ ಒಂದು ಹೊಸ ಶಾಖೆಯನ್ನು ತೆರೆದಿದ್ದೇವೆ. ಆ ಶಾಖೆಯ ಹೆಸರಿನಲ್ಲಿ ಒಂದು ಚಾಲ್ತಿ ಖಾತೆಯನ್ನು ತೆರೆಯಲು ಅರ್ಜಿ ಸಲ್ಲಿಸಿದಾಗ, ಭಾರತೀಯ ಸ್ಟೇಟ್ ಬ್ಯಾಂಕಿನವರು ಶಾಖೆ ತೆರೆಯಲು ರಿಜರ್ವ್ ಬ್ಯಾಂಕಿನ ಲೈಸೆನ್ಸ್‌ನ ಪ್ರತಿಯನ್ನು ಕೋರಿದ್ದಾರೆ. ಈ ಪರಿಸ್ಥಿತಿಯಲ್ಲಿ ಶಾಖೆಯ ಹೆಸರಿನಲ್ಲಿ ಖಾತೆ ಹೇಗೆ ತೆರೆಯಲಿ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಳಗಾವಿ ಜಿಲ್ಲೆ.**

**ಉತ್ತರ :** ನೀವು ಹೊಸ ಶಾಖೆಯನ್ನು ತೆರೆದಾಗ ತಕ್ಷಣ ಅದರ ಸೂಚನೆಯನ್ನು ಭಾರತೀಯ ರಿಜರ್ವ್ ಬ್ಯಾಂಕಿಗೆ ತಿಳಿಸಬೇಕು. ಅದರೊಂದಿಗೆ, ಶಾಖೆಯ ಅನುಮತಿ ಪತ್ರ (Licence)ವನ್ನು ನೀಡುವಂತೆ ಕೋರಿಕೆ ಸಲ್ಲಿಸಬೇಕು. ನೀವು ಈಗಾಗಲೇ ಅನುಮತಿ ಪತ್ರಕ್ಕೆ ಕೋರಿಕೆ ಸಲ್ಲಿಸಿಲ್ಲದಿದ್ದರೆ, ತಕ್ಷಣ ಅರ್ಜಿ ಸಲ್ಲಿಸಿ. ರಿಜರ್ವ್ ಬ್ಯಾಂಕು ಅನುಮತಿ ಪತ್ರ ನೀಡುತ್ತದೆ.

## ಅಕ್ಟೋಬರ್ ತಿಂಗಳಲ್ಲಿ ರೂ. 1.87 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ




**ನವದೆಹಲಿ :** ದಸರಾ–ದೀಪಾವಳಿ ಹಬ್ಬದ ಸಮಯದಲ್ಲಿ ವ್ಯಾಪಾರ ಹೆಚ್ಚಳದಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಅಕ್ಟೋಬರ್‌ನಲ್ಲಿ ಸಂಗ್ರಹಿಸಿದ ಸರಕು ಮತ್ತು ಸೇವಾ ತೆರಿಗೆ 1.87 ಲಕ್ಷ ಕೋಟಿ ರೂಪಾಯಿ ಆಗಿದೆ. 2017ರ ಜುಲೈ 1ರಂದು ಜಿಎಸ್‌ಟಿ ಜಾರಿಗೆ ಬಂದ ನಂತರ ಎರಡನೇ ಅತಿ ಹೆಚ್ಚು ಸಂಗ್ರಹವಾಗಿದೆ. ಏಪ್ರಿಲ್ 2024 ರಲ್ಲಿ 2.10 ಲಕ್ಷ ಕೋಟಿ ರೂಪಾಯಿ ಅತ್ಯಧಿಕ ಜಿಎಸ್‌ಟಿ ಸಂಗ್ರಹವಾಗಿತ್ತು.

ಅಕ್ಟೋಬರ್ ಅಂಕಿಅಂಶ ಪ್ರಕಾರ ಶೇಕಡಾ 8.9ರಷ್ಟು ವಾರ್ಷಿಕ ಬೆಳವಣಿಗೆಯಾಗಿದೆ ಎಂದು ಕಳೆದ ವಾರ ಬಿಡುಗಡೆಯಾದ ಹಣಕಾಸು ಸಚಿವಾಲಯದ ಅಂಕಿಅಂಶಗಳು ತೋರಿಸಿವೆ. ಅಕ್ಟೋಬರ್ 2023 ರಲ್ಲಿ, ಒಟ್ಟು ಜಿಎಸ್‌ಟಿ ಆದಾಯ 1.72 ಲಕ್ಷ ಕೋಟಿ ರೂಪಾಯಿ ಆಗಿತ್ತು. ಇತ್ತೀಚಿನ ಬೆಳವಣಿಗೆಯು ದೇಶೀಯ ಮಾರಾಟದಲ್ಲಿನ ಏರಿಕೆ ಮತ್ತು ವರ್ಧಿತ ಅನುಸರಣೆಯ ಖಾತೆಯಲ್ಲಿದೆ.

ಒಟ್ಟು ಜಿಎಸ್‌ಟಿ ಸಂಗ್ರಹದಲ್ಲಿ ಕೇಂದ್ರೀಯ ಜಿಎಸ್‌ಟಿ 33,821 ಕೋಟಿ, ರಾಜ್ಯ ಜಿಎಸ್‌ಟಿ 41,864 ಕೋಟಿ, ಇಂಟಿಗ್ರೇಟೆಡ್ ಜಿಎಸ್‌ಟಿ 99,111 ಕೋಟಿ, ಮತ್ತು 2024ರ ಅಕ್ಟೋಬರ್ ತಿಂಗಳ ಸೆಸ್ ಸಂಗ್ರಹ 12,550 ಕೋಟಿ, ದೇಶೀಯ ವಹಿವಾಟುಗಳಿಂದ ಜಿಎಸ್‌ಟಿ ಆದಾಯವು ಶೇಕಡಾ 10.6ರಷ್ಟು ಏರಿಕೆಯಾಗಿದ್ದು, 1.42 ಲಕ್ಷ ಕೋಟಿ ರೂಪಾಯಿಗೆ ತಲುಪಿದೆ. ಆಮದು ಮೇಲಿನ ತೆರಿಗೆಯಿಂದ ಆದಾಯವು ಸರಿಸುಮಾರು ಶೇಕಡಾ 4 ರಷ್ಟು ಏರಿಕೆ ಕಂಡಿತು, ಒಟ್ಟು 45,096 ಕೋಟಿ ರೂಪಾಯಿ ಆಗಿದೆ.

ಇತ್ತೀಚಿನ ಜಿಎಸ್‌ಟಿ ಸಂಗ್ರಹಣೆಗಳು ಭಾರತದಲ್ಲಿ ಗ್ರಾಹಕ ವೆಚ್ಚದಲ್ಲಿ ಸಂಭಾವ್ಯ ನಿಧಾನಗತಿಯನ್ನು ಸೂಚಿಸುತ್ತವೆ, ಇದು ಹಿಂದಿನ ಆರ್ಥಿಕ ವರ್ಷದಲ್ಲಿ ಏರಿಕೆಯಾಗಿದೆ. ಏಕ–ಅಂಕಿಯ ಬೆಳವಣಿಗೆಯು ಕೂಲಿಂಗ್–ಆಫ್ ಅವಧಿಯನ್ನು ಸಂಕೇತಿಸುತ್ತದೆ.

ತಿಂಗಳಲ್ಲಿ ನಿವ್ವಳ GST ಸಂಗ್ರಹಣೆಗಳು (ಮರುಪಾವತಿಯ ನಂತರ) ಶೇಕಡಾ 8ರಿಂದ 1.68 ಲಕ್ಷ ಕೋಟಿ ರೂಪಾಯಿಗಳ ಬೆಳವಣಿಗೆಯನ್ನು ತೋರಿಸುತ್ತವೆ. ಮರುಪಾವತಿಯು ಶೇಕಡಾ 18.2 ಬೆಳವಣಿಗೆಯನ್ನು ದಾಖಲಿಸಿದೆ.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ರಾಜ್ಯದ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಉತ್ಪಾದನೆಯಾಗುವ ಎಲ್ಲಾ ಉತ್ಪನ್ನಗಳ ಮೇಲೆ ಕನ್ನಡದಲ್ಲಿಯೂ ಹೆಸರು ಮುದ್ರಿಸುವುದನ್ನು ಕಡ್ಡಾಯ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯೋತ್ಸವ ದಿನದಂದು ಘೋಷಣೆ ಮಾಡಿದ್ದಾರೆ. ಇತರೆ ರಾಜ್ಯದಿಂದ ಬಂದವರೂ ಕನ್ನಡ ನಮ್ಮ ಜನ ಕಲಿಸಬೇಕು, ಅವರು ಕನ್ನಡದಲ್ಲೇ ಮಾತನಾಡಿ ವ್ಯವಹಾರ ಮಾಡುವಂತೆ ಮಾಡಬೇಕು ಎಂದಿದ್ದಾರೆ.
- ರಾಜ್ಯಾದ್ಯಂತ ಗ್ರಾಮ ಪಂಚಾಯಿತಿಗಳಲ್ಲಿ ಸರ್ಕಾರ ಸ್ಥಾಪಿಸಿರುವ ಗ್ರಂಥಾಲಯಗಳು ಶಾಲಾ–ಕಾಲೇಜು ವಿದ್ಯಾರ್ಥಿಗಳಗಷ್ಟೇ ಅಲ್ಲದೆ, ಅನಕ್ಷರಸ್ಥ ಮಹಿಳೆಯರಿಗೂ ಕಲಿಕಾ ಕೇಂದ್ರಗಳಾಗಿ ಮಾರ್ಪಟ್ಟಿವೆ. 7ನೇ ತರಗತಿಯ ನಂತರ ಓದು ನಿಲ್ಲಿಸಿ ಚಿಕ್ಕ ವಯಸ್ಸಿನಲ್ಲೇ ಮದುವೆಯಾಗಿದ್ದ 44 ವರ್ಷದ ಮಂಜುಳಾ ಎಂಬುವವರು ಕೂಡ ಇದೀಗ ಗ್ರಂಥಾಲಯದಲ್ಲಿ ಕಲಿಯುವ ಮೂಲಕ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ತಯಾರಿ ನಡೆಸಿದ್ದಾರೆ.
- ದಕ್ಷಿಣ ಕನ್ನಡದ ಲೋಹಿತ್ ಶೆಟ್ಟಿ ಅವರು ಹಣಕಾಸಿನ ಸಮಸ್ಯೆಯಿಂದಾಗಿ 10ನೇ ತರಗತಿಯನ್ನು ಅರ್ಧದಲ್ಲಿಯೇ ಬಿಟ್ಟ ನಂತರ ಕೃಷಿಯತ್ತ ಮುಖ ಮಾಡಿ, ರಂಬುಟಾನ್, ಡ್ರ್ಯಾಗನ್ ಫ್ರೂಟ್ ಹಾಗೂ ಮ್ಯಾಂಗೋಸ್ಟೀನ್ನಂತಹ ವಿದೇಶಿ ಹಣ್ಣುಗಳನ್ನು ಬೆಳೆಯುವ ಮೂಲಕ ವಾರ್ಷಿಕವಾಗಿ ರೂ. 1 ಕೋಟಿ ಅಧಿಕ ಲಾಭ ಗಳಿಸುತ್ತಿದ್ದಾರೆ.
- ಯೂರೋಪಿನ ಸ್ಪೇನ್ ದೇಶದಲ್ಲಿ ಮಳೆ ಅಬ್ಬರಿಸಿ ಸುರಿದಿದ್ದು, ಭೀಕರ ಪ್ರವಾಹದಲ್ಲಿ ಕನಿಷ್ಠ 158 ಮಂದಿ ಮೃತಪಟ್ಟಿದ್ದರೆ, ಹಲವು ಕಟ್ಟಡಗಳು, ಸೇತುವೆಗಳು ಮತ್ತು ಕಾರುಗಳು ನೆರೆನೀರಲ್ಲಿ ಕೊಚ್ಚಿಹೋಗಿವೆ. ಮಣ್ಣಿನ ಕಟ್ಟಡಗಳ ಅವಶೇಷಗಳಡಿ ಸಿಲುಕಿರುವವರ ಶೋಧಕ್ಕಾಗಿ ರಕ್ಷಣಾ ಸಿಬ್ಬಂದಿ ಶೋಧ ನಡೆಸುತ್ತಿದ್ದಾರೆ.
- ಮಂಡ್ಯ ಜಿಲ್ಲೆಯ ಹಲ್ಲೇಗೆರೆ ಗ್ರಾಮದ ವಿವೇಕ್ ಮೂರ್ತಿ ಅವರು ಅಮೆರಿಕಾದಲ್ಲಿ ಪ್ರಸಿದ್ಧ ಸರ್ಜನ್ ಜನರಲ್ ಆಗಿದ್ದಾರೆ. ಅವರ ಪ್ರಕಾರ, ಸಾಮಾಜಿಕ ಮಾಧ್ಯಮಗಳು ಮಾನಸಿಕ ಆರೋಗ್ಯದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತಿದ್ದು, ಮಾನಸಿಕ ಆರೋಗ್ಯದ ಕುರಿತು ಗಮನಹರಿಸಬೇಕಾದ ತುರ್ತು ಅಗತ್ಯವಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

## ಓದುಗರ ಅನಿಸಿಕೆ...



**ಇತರೆ ರಾಜ್ಯಗಳು ಅನುಸರಿಸಲಿ :** ಇತರೆ ರಾಜ್ಯಗಳಲ್ಲಿ ಆರ್ಥಿಕ ಹಿಂಜರಿತ ಇದ್ದರೆ, ನಮ್ಮ ರಾಜ್ಯದ ಪ್ರಗತಿ ಏರುಗತಿಯಲ್ಲಿ ಸಾಗಿದೆ. ಇದಕ್ಕೆ ಕಾರಣ, ಬಡ ಜನರ ನೆರವಿಗೆ ಬಂದ ಸರ್ಕಾರದ ಗ್ಯಾರಂಟಿ ಯೋಜನೆಗಳಾಗಿವೆ. ಅಲ್ಲದೆ, ರಾಜ್ಯ ಸರ್ಕಾರದ ಹಲವು ಜನಪರ ಯೋಜನೆಗಳು ಅಭಿವೃದ್ಧಿಯ ಫಲ ಎಲ್ಲ ವರ್ಗಗಳಿಗೂ ತಲುಪುವುದನ್ನು ಖಾತ್ರಿ ಪಡಿಸಿವೆ. ಕರ್ನಾಟಕದ ಈ ಆರ್ಥಿಕ ಮಾದರಿಯನ್ನು ಇತರೆ ರಾಜ್ಯಗಳು ಅನುಸರಿಸಲಿ.

**▸▸ ಜಿ. ಹೊನ್ನಪ್ಪ ಜನ್ನಪ್ಪ, ತುಮಕೂರು**

**ಸ್ಮರಿಸಬೇಕಾದ್ದು ಕರ್ತವ್ಯವಾಗಿದೆ :** ನಮ್ಮ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ನಡೆಸಿಕೊಂಡು ಬರುತ್ತಿರುವ ಕಾನೂನು ಮತ್ತು ತರಬೇತಿ ಕಾರ್ಯಕ್ರಮ ದೇಶದ ಗಮನ ಸೆಳೆದಿದ್ದು, ಇತ್ತೀಚೆಗೆ ಲಕ್ನೋದಲ್ಲಿ ನಡೆದ 2024ರ ಫ್ರಾಂಟಿಯರ್ಸ್ ಇನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಅವಾರ್ಡ್ಸ್ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಿರುವುದು ನಮಗೆಲ್ಲ ಹರ್ಷ ಉಂಟುಮಾಡಿದೆ.

**▸▸ ಕೆ. ಅಚ್ಯುತಕುಮಾರ್, ತಿಪಟೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.